**ದಾರಿದೀಪೋಕ್ತಿ**

ಜೀವನದಲ್ಲಿ ಯಾವತ್ತೂ ಬಿಜಿಯಾಗಿರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ನಿಮಗೆ ಬೇರೆ ಅನಗತ್ಯ ವಿಷಯಗಳತ್ತ ಗಮನಹರಿಸಲು ಪುರುಸೊತ್ತು ಸಿಗುವುದಿಲ್ಲ. ಟೀಕೆಗಳಿಗೆ ಉತ್ತರಿಸಲು, ತಲೆಕೆಡಿಸಿಕೊಳ್ಳಲು ಸಮಯ ಸಿಗುವುದಿಲ್ಲ. ನಿಮ್ಮ ಕೆಲಸವೇ ಮುಖ್ಯವಾಗುತ್ತದೆ.

**ವಕ್ರತುಂಡೋಕ್ತಿ**

ನಮಗೇ ಎಲ್ಲ ಗೊತ್ತಿದೆ ಎಂದು ನಟಿಸಬಾರದು. ಒಂದು ವೇಳೆ ನೀವು ಗೂಗಲ್ ಆಗಿದ್ದರೆ ಈ ಮಾತು ಅನ್ವಯಿಸಲಿಕ್ಕಿಲ್ಲ.

# ವಿಶ್ವವಾಣಿ

ವಿಶ್ವಾಸವೇ ವಿಶ್ವ



**ಕೆ.ಶಿವನ್**
ಇಸ್ರೋ ಮಾಜಿ ಅಧ್ಯಕ್ಷ

ಸೋಮವಾರದ ಸ್ಫೂರ್ತಿ

ಸರಕಾರಿ ಶಾಲೆ, ತಮಿಳು ಮಾಧ್ಯಮದಲ್ಲಿ ಕಲಿತೆ. ಶಿಕ್ಷಕನಾಗಲು ಬಯಸಿದ್ದೆ. ಇಂಜಿನಿಯರಿಂಗ್ ಸ್ನಾತಕೋತ್ತರ ಪದವಿ ನಂತರ ಉದ್ಯೋಗ ಅರಸಿ ಇಸ್ರೋಗೆ ಹೋಗಿದ್ದೆ. ಅಲ್ಲಿ ನನಗೆ 'ನಿಷ್ಪ್ರಯೋಜಕ' ಎಂದು ಬೈದು ಹೊರ ಹೋಗು ಎಂದಿದ್ದರು. ನನಗೆ ಇಸ್ರೋದ ಉಪಗ್ರಹ ಕೇಂದ್ರದಲ್ಲಿ ಕೆಲಸ ಸಿಗಲಿಲ್ಲ, ಆದರೆ ರಾಕೆಟ್ ಕೇಂದ್ರದಲ್ಲಿ ಉದ್ಯೋಗ ಸಿಕ್ಕಿತು. ಜಿಎಸ್‌ಎಲ್‌ವಿ ವಿಭಾಗಕ್ಕೆ ನಿರ್ದೇಶಕನಾಗಿ ರಾಕೆಟ್‌ಗಳನ್ನು ಉಡಾವಣೆ ಮಾಡಲು ಮುಂದಾಗಿ 4 ಬಾರಿ ವಿಫಲನಾದೆ. ಸ್ನೇಹಿತರೆಲ್ಲ ಛೇಡಿಸಿದರು. ಅನೇಕ ಸವಾಲು, ಅಪಾಯಗಳನ್ನು ಎದುರಿಸಿದೆ. ಛಲ ಬಿಡದೆ ಪುನಃ ಪ್ರಯತ್ನಿಸಿ ಜಿಎಸ್‌ಎಲ್‌ವಿ ಯೋಜನೆ ಯಶಸ್ವಿಗೊಳಿಸಿದ ಬಳಿಕ ಇಸ್ರೋ ಅಧ್ಯಕ್ಷನಾಗಲು ಅವಕಾಶ ದೊರಕಿತು. ಚಂದ್ರಯಾನ-2 ವಿಫಲಗೊಂಡ ನಂತರ ನಾವು ಸುಮ್ಮನೆ ಕೂರಲಿಲ್ಲ. ಮರುದಿನವೇ ಚಂದ್ರಯಾನ-3ಕ್ಕಾಗಿ ತಯಾರಿ ಆರಂಭಿಸಿ ಯಶ ಕಂಡೆವು.






ಸಿದ್ದರಾಮಯ್ಯ ತೀವ್ರ ಆಕ್ರೋಶ

## ಫಲಾನುಭವಿಗಳಿಗೆ ಬಿಜೆಪಿ ಅವಮಾನ



**ಚಿಕ್ಕಮಗಳೂರು:** ಗ್ಯಾರಂಟಿ ಯೋಜನೆಗಳ ನಾಲ್ಕೂವರೆ ಕೋಟಿ ಫಲಾನುಭವಿಗಳಿಗೆ ಬಿಜೆಪಿ ನಿರಂತರವಾಗಿ ಅವಮಾನಿಸುತ್ತಿದೆ. ಮತ್ತೊಂದು ಕಡೆ ವಿಪರೀತ ಸುಳ್ಳುಗಳನ್ನು ಹೇಳುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು. ಚಿಕ್ಕಮಗಳೂರಿನಲ್ಲಿ ಹಮ್ಮಿಕೊಂಡಿದ್ದ ಸರಕಾರದ ಐದು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಅವರು ಮಾತನಾಡಿದರು.

2ನೇ ಬಾರಿಗೆ ಸಿಕ್ಕಿದ ಅವಕಾಶ

## ಶಹಭಾಜ್ ಷರೀಫ್ ಪಾಕಿಸ್ತಾನ ಪ್ರಧಾನಿ



**ಇಸ್ಲಾಮಾಬಾದ್:** ಪಾಕಿಸ್ತಾನದ ನೂತನ ಪ್ರಧಾನಿಯಾಗಿ ನವಾಜ್ ಷರೀಫ್ ಸೋದರ, ಶಹಭಾಜ್ ಷರೀಫ್ ಆಯ್ಕೆಯಾಗಿದ್ದಾರೆ. ನವಾಜ್ ಅವರ ಪಿಎಂಎಲ್-ಎನ್, ಪಿಪಿಪಿ ಒಕ್ಕೂಟದ ಸರ್ವಸಮ್ಮತ ಅಭ್ಯರ್ಥಿಯಾಗಿ ಶಹಭಾಜ್‌ರನ್ನು ಆಯ್ಕೆ ಮಾಡಲಾಗಿದೆ. ಈ ಮೈತ್ರಿಕೂಟ 201 ಸ್ಥಾನಗಳನ್ನು ಪಡೆದಿದೆ. ಇಮ್ರಾನ್‌ಪಕ್ಷದ ಆಯುಬ್ ಖಾನ್‌ಗೆ ಕೇವಲ 92 ಮತ ಬಿದ್ದಿವೆ.

ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಪರಂ | ಆಯಕಟ್ಟಿನ ಜಾಗದಲ್ಲಿ ಗಸ್ತು ಹೆಚ್ಚಿಸಲು ಸೂಚನೆ
ಶೀಘ್ರ ಬಂಧನಕ್ಕೆ ಸೂಚಿಸಿದ ಗೃಹ ಸಚಿವ | ಮುಂದೆ ಈಗಾಗದಂತೆ ಮುನ್ನೆಚ್ಚರಿಕೆ ವಹಿಸಲು ನಿರ್ದೇಶನ

# ಚಹರೆ ಸಿಕ್ಕರೂ ಸಿಕ್ಕಿಲ್ಲ ಆರೋಪಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯ ರಾಜಧಾನಿಯನ್ನು ತಲ್ಲಣಗೊಳಿಸಿರುವ ರಾಮೇಶ್ವರ ಕೆಫೆ ಬಾಂಬ್ ಬ್ಲಾಸ್ಟ್ ನಡೆದು ಎರಡು ದಿನ ಕಳೆದರೂ, ಆಗುಂತಕನ ಚಹರೆ ಮಾತ್ರ ಪತ್ತೆಯಾಗಿದ್ದು ಆರೋಪಿ ಪೊಲೀಸರ ಕೈಗೆ ಸಿಕ್ಕಿಲ್ಲ.

ಈ ಬ್ಲಾಸ್ಟ್ ಪ್ರಕರಣದ ಆರೋಪಿಯನ್ನು ಬಂಧಿಸ ಬೇಕು ಎನ್ನುವ ಒತ್ತಡ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬೆನ್ನಲ್ಲೇ, ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆದುಕೊಂಡಿದ್ದಾರೆ.

ಸಭೆಯಲ್ಲಿ ಪ್ರಮುಖವಾಗಿ ಬಾಂಬ್ ಬ್ಲಾಸ್ಟ್‌ಗೆ ಹಿಂದಿನ ರೂವಾರಿ ಯಾರು? ಸಿ.ಸಿ.ಟಿವಿಯಲ್ಲಿರುವ ಆರೋಪಿತನ ಪತ್ತೆ ಯಾವೆಲ್ಲ ಕ್ರಮವಹಿಸಲಾಗಿದೆ ಎನ್ನುವ ಬಗ್ಗೆ ಪೊಲೀಸ್ ಅಧಿಕಾರಿಗಳು ಗೃಹ ಸಚಿವ ಪರಮೇಶ್ವರ್ ಅವರಿಗೆ ವಿವರಿಸಿದ್ದಾರೆ. ಈ ವೇಳೆ ಆರೋಪಿಯನ್ನು ಶೀಘ್ರ ಬಂಧಿಸುವಂತೆ ಸೂಚನೆ ನೀಡಿರುವ ಸಚಿವರು, ಇನ್ನು ಮುಂದೆ ಈ ರೀತಿಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಸೂಚನೆ ನೀಡಿದ್ದಾರೆ.

**ಒಂಟಿತೋಳ ಮಾದರಿ:** ಪ್ರಮುಖವಾಗಿ ಒಂಟಿ ತೋಳ ಮಾದರಿಯಲ್ಲಿ ಶಂಕಿತ ಉಗ್ರನು ಕೃತ್ಯವೆಸಗಿರುವ ಸಾಧ್ಯತೆಯಿದೆ ಎನ್ನುವ ಮಾತುಗಳನ್ನು ಹಿರಿಯ ಅಧಿಕಾರಿಗಳು ವ್ಯಕ್ತಪಡಿಸಿರುವುದರಿಂದ ಆ ನಿಟ್ಟಿನಲ್ಲಿ ತನಿಖೆಯನ್ನು ಆರಂಭಿಸಲಾಗಿದೆ. ಘಟನಾ ಸ್ಥಳದಲ್ಲಿ ದೊರೆತ ಐಇಡಿ ಬಾಂಬ್ ತಯಾರಿಕೆಗೆ ಬಳಸಲಾದ ವಸ್ತುಗಳು ಪತ್ತೆ ಹಾಗೂ ರಾಜ್ಯದಲ್ಲಿ ಇತ್ತೀಚೆಗೆ ಪ್ರವರ್ಧಮಾನಕ್ಕೆ ಬಂದಿರುವ ಐಸಿಸ್ ಚಟುವಟಿಕೆಗಳ ವಿಶ್ಲೇಷಣೆ ಆಧಾರದಲ್ಲಿ 'ಐಸಿಸ್' ಪಾತ್ರದ ಕುರಿತು ಮಾಹಿತಿ ಕಲೆ ಹಾಕುತ್ತಿದ್ದಾರೆ.

→ 8



- ಒಬ್ಬನೇ ಪ್ಲಾನ್ ಮಾಡಿ ದಾಳಿ ಮಾಡಿರುವ ಸಾಧ್ಯತೆ
- ಮೂರ್ನಾಲ್ಕು ಬಾರಿ ಭೇಟಿ ನೀಡಿ ಸಂಚು
- ಸಿಸಿಟಿವಿಯಲ್ಲೂ ಮುಖ ಕಾಣದಂತೆ ಎಚ್ಚರ
- ಎರಡು ಬ್ಯಾಗ್ ಬಳಕೆ ಮಾಡಿರುವ ಸಂಭವ

### ಯೋಜನೆ ರೂಪಿಸಿಯೇ ದಾಳಿ

ಇನ್ನು ರಾಮೇಶ್ವರ ಕಫೆ ಮೇಲಿನ ದಾಳಿಯನ್ನು ಆರಂಭದಲ್ಲಿ ವಿವಿಧ ಆಯಾಮದಲ್ಲಿ ವಿಶ್ಲೇಷಿಸಲಾಗಿತ್ತು. ಆದರೆ ಆಗುಂತಕ ಸ್ಫೋಟಕ್ಕೆ ಬಳಸಿರುವ ವಸ್ತುಗಳು, ಯಾವುದೇ ಕುರುಹು ಸಿಗದಂತೆ ಪರಾರಿಯಾಗಿರುವುದನ್ನು ಗಮನಿಸಿದರೆ ಇದೊಂದು ಪ್ರೀಪ್ಲಾನ್ ದಾಳಿ ಎನ್ನುವುದು ಸ್ಪಷ್ಟ. ಕೆಫೆಯಲ್ಲಿ ಆತ ತಿಂಡಿ ತಿಂದಿದ್ದರೂ ಮುಖದ ಚಹರೆ ಸಿಗದೇ ಇರಲು ಪ್ರಮುಖವಾಗಿ, ಆತ ತಿಂಡಿ ತಿನ್ನುವ ಮೊದಲು ಸಿಸಿ ಕ್ಯಾಮೆರಾ ಯಾವ ಭಾಗಕ್ಕೆ ಕವರ್ ಆಗುವುದಿಲ್ಲ ಎನ್ನುವುದು ಖಚಿತಪಡಿಸಿಕೊಂಡಿದ್ದಾನೆ. ದಾಳಿಗೂ ಮೊದಲು ನಾಲ್ಕೈದು ಬಾರಿ ಹೋಟೆಲ್‌ಗೆ ಭೇಟಿ ನೀಡಿ, ಎಲ್ಲ ಮಾಹಿತಿಯನ್ನು ಕಲೆಹಾಕಿರುವುದು ಖಚಿತ. ಇದರೊಂದಿಗೆ ಬ್ಯಾಗ್ ಅನ್ನು ಬಿಟ್ಟು ಹೋದರೆ ಅನುಮಾನ ಬರಲಿದೆ ಎನ್ನುವ ಕಾರಣಕ್ಕೆ, ಎರಡು ಬ್ಯಾಗ್ ತಗೆದುಕೊಂಡು ಬಂದಿದ್ದ. ಆದ್ದರಿಂದ ಈ ಪ್ರಕರಣವನ್ನು ಎಚ್ಚರಿಕೆ ಗಂಟೆಯನ್ನಾಗಿ ಬೆಂಗಳೂರು ಪೊಲೀಸ್ ಸ್ವೀಕರಿಸಬೇಕು ಎನ್ನುವ ಮಾತುಗಳು ಕೇಳಿಬಂದಿದೆ.



ಹೊಸಪೇಟೆ ತಾಲೂಕಿನ ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಪುಟ್ಟ ಮಗುವಿಗೆ ಪೋಲಿಯೊ ಹನಿ ಹಾಕುವ ಮೂಲಕ ಮುಖ್ಯಮಂತ್ರಿ ಸಿದ್ಧರಾಮಯ್ಯ ರಾಜ್ಯಾದ್ಯಂತದ ಪಲ್ಸ್ ಪೋಲಿಯೊ ಅಭಿಯಾನಕ್ಕೆ ಚಾಲನೆ ನೀಡಿದರು.

ಬಿಹಾರದ ಪಟನಾದಲ್ಲಿ ಜನವಿಶ್ವಾಸ ಯಾತ್ರೆಯ ಸಮಾರೋಪ

## ಇಂಡಿಯ ಲೋಕ ಕಹಳೆ

**ಪಟನಾ:** ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ನಡೆಸುತ್ತಿದ್ದ ಜನವಿಶ್ವಾಸ್ ಮಹಾರ್‍ಯಾಲಿಯ ಸಮಾರೋಪದಲ್ಲಿ ಇಂಡಿಯ ಒಕ್ಕೂಟ ಮತ್ತೆ ಒಗ್ಗಟ್ಟು ಪ್ರದರ್ಶಿಸಿದ್ದು, ಕೇಂದ್ರದ ಮೋದಿ ಸರಕಾರದ ವಿರುದ್ಧ ಸಮರ ಸಾರಿದೆ. ಈ ಮೂಲಕ ಲೋಕಸಭೆ ಚುನಾವಣಾ ಪ್ರಚಾರ ಕಹಳೆ ಊದಿದೆ.

ಇನ್ನು ಕೆಲವೇ ದಿನಗಳಲ್ಲಿ ಲೋಕಸಭೆ ಚುನಾವಣಾ ದಿನಾಂಕ ಘೋಷಣೆಯಾಗಲಿದ್ದು, ಈ ಸಮಾವೇಶ ಮಹತ್ವ ಪಡೆದುಕೊಂಡಿದೆ. ಇದರಲ್ಲಿ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಎಸ್‌ಪಿಯ ಅಖಿಲೇಶ್ ಯಾದವ್, ಆರ್‌ಜೆಡಿಯ ಲಾಲು ಪ್ರಸಾದ್ ಯಾದವ್, ಎಡಪಕ್ಷಗಳ ಸೀತಾರಾಂ ಯೆಚೂರಿ, ಸೇರಿದಂತೆ ಪ್ರಮುಖ ಭಾಗಿಯಾಗಿದ್ದರು.

→ 8



- ಇಂಡಿಯ ಒಕ್ಕೂಟದ ನಾಯಕರು ಭಾಗಿ
- ಲೋಕ ಚುನಾವಣಾ ಪ್ರಚಾರ ಚುರುಕು
- ಮೋದಿ ಸರಕಾರದ ವಿರುದ್ಧ ವಾಗ್ದಾಳಿ

## ಹೊಸ ಸರಕಾರದ ನೂರು ದಿನಗಳ ಅಜೆಂಡಾ ಫಿಕ್ಸ್!

- ಮೋದಿ ನೇತೃತ್ವದಲ್ಲಿ ಸಚಿವರ ಸಭೆ
- ಸಚಿವರಿಗೆ ಪ್ರಚಾರದ ಬಗ್ಗೆ ಪಾಠ



**ದೆಹಲಿ:** ಲೋಕಸಭೆ ಚುನಾವಣೆ ಮುಗಿದು ಮೇನಲ್ಲಿ ಹೊಸ ಸರಕಾರ ರಚಿಸಿದ ಮೇಲೆ ಮೊದಲ ನೂರು ದಿನದ ಅಜೆಂಡಾ ಏನಿರಬೇಕು ಎಂಬ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಚಿವರ ಪರಿಷತ್ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

ಭಾನುವಾರ ಪ್ರಸಕ್ತ ಸರಕಾರದ ಕಡೇ ಮಂತ್ರಿ ಪರಿಷತ್ ಸಭೆ ನಡೆದಿದ್ದು, ಲೋಕಸಭೆ ಚುನಾವಣೆ, 2047ರ ಹೊತ್ತಿಗೆ ಅಭಿವೃದ್ಧಿ ಭಾರತ, ಮುಂದಿನ ಐದು ವರ್ಷಗಳ ಆಡಳಿತದ ಬಗ್ಗೆ ಪ್ರಧಾನಿ ಸಚಿವರಿಂದ ಮಾಹಿತಿ ಪಡೆದಿದ್ದಾರೆ. ಅಷ್ಟೇ ಅಲ್ಲ, ಲೋಕಸಭೆ ಚುನಾವಣೆ ಎದುರಿಸುವ ಬಗ್ಗೆ ಸಚಿವರಿಗೆ ಒಂದು ಗಂಟೆ ಪಾಠ ಮಾಡಿದ್ದಾರೆ. ಸಚಿವರು ದೇಶಾದ್ಯಂತ 2700 ಸಭೆ, ಕಾರ್ಯಾಗಾರ, ವಿಚಾರ ಸಂಕಿರಣಗಳು ಮತ್ತು 20 ಲಕ್ಷ ಯುವಕರಿಂದ ಪಡೆದ ಸಲಹೆಗಳನ್ನು ಆಧರಿಸಿ ಪಿಪಿಟಿ ನೀಡಿದ್ದಾರೆ. ಸುಮಾರು 8 ಗಂಟೆಗಳ ಕಾಲ ಈ ಸಭೆ ನಡೆದಿದೆ.


